ಪ್ರಬಂಧ

# ಅಡಿ ತಪ್ಪಿದ ನಡಿಗೆ




ಎಂ.ಎಸ್. ನರಸಿಂಹಮೂರ್ತಿ

ಕಲೆ: ಸಂತೋಷ್ ಸಸಿಹಿತ್ಲು


ಮನವೊಂದು ಮರ್ಕಟ. ಆಲೋಚನೆಗಳು ಕರ್ಕಟ.

ವಾಕ್ ಮಾಡುವಾಗ ತಲೆ ಬಿಸಿ ಇರಬಾರದು. ಕಷ್ಟಗಳ ಬಗ್ಗೆ ಯೋಚಿಸಬಾರದು. ಪ್ರಶಾಂತವಾಗಿ ನಡೆಯಬೇಕು. ಪ್ರಕೃತಿಯ ಸೌಂದರ್ಯ ಆರಾಧಿಸಬೇಕು ಎಂದು ಹೇಳುತ್ತಾರೆ. ಆದರೆ, ಹಾಗೆ ಆಗುವುದಿಲ್ಲ. ನಾನು 17ನೇ ಕ್ರಾಸಲ್ಲಿ ಬೆಳಿಗ್ಗೆ ಒಬ್ಬನೇ ವಾಕ್ ಮಾಡುತ್ತಿರುವಾಗ ಬಿದ್ದೆ. ಬಲವಾಗಿ ಬಿದ್ದೆ. 8ನೇ ಕ್ರಾಸಲ್ಲಿ ಬಿದ್ದಿದ್ದರೆ ಇಷ್ಟು ಗಾಯ ಆಗುತ್ತಿರಲಿಲ್ಲ ಎಂಬ ಮಾತು ಕೇಳಿ ಬಂತು. ಬೀಳುವ ಮುನ್ನಾ ದಿನ ನಾನು ಸಂತಾಪ ಸೂಚಕ ಸಭೆಗೆ ಹೋಗಿದ್ದ ವಿಷಯದ ಬಗ್ಗೆ ಯೋಚಿಸುತ್ತಾ ನಡೆಯುತ್ತಿದ್ದೆ. ಅದು ಕೋ-ಆಪರೇಟಿವ್ ಸೊಸೈಟಿಯೊಂದರ ಸರ್ವ ಸದಸ್ಯರ ಸಾಮಾನ್ಯ ಸಭೆ. ನಾನು ಅಲ್ಲಿ ಸದಸ್ಯ. ಸಭೆಯ ಪ್ರಾರಂಭಕ್ಕೆ ಕಳೆದ ವರ್ಷದಲ್ಲಿ ಸತ್ತವರಿಗೆ ಎರಡು ನಿಮಿಷ ಮೌನಾಚರಣೆ ಎಂದಾಗ ಎದ್ದು ನಿಲ್ಲಬೇಕು.

ಎಲ್ಲರೂ ಎದ್ದು ನಿಂತರು. ಕಾರ್ಯದರ್ಶಿ ಸತ್ತವರ ಹೆಸರುಗಳನ್ನು ಹೇಳಿದರು. ನಾಲ್ಕನೇ ಹೆಸರು 'ಎಂ.ಎಸ್. ನರಸಿಂಹಮೂರ್ತಿ' ಎಂದಾಗ ನನಗೆ ಗಾಬರಿಯಾಯಿತು. ನಾನು ಎದುರಿಗೆ ನಿಂತೇ ಇದ್ದೀನಿ, 'ಇಲ್ಲೇ ಇದ್ದೀನಿ. ನನ್ನ ಬಗ್ಗೆ ನಾನೇ ಸಂತಾಪ ಸೂಚಿಸುವುದು ಸರಿಯಾ' ಎಂದು ಕೇಳಿಬಿಡೋಣ ಎಂದರೆ ಎಲ್ಲೆಲ್ಲೂ ಮೌನವಿತ್ತು, ಸುಮ್ಮನಾದೆ. ಹತ್ತು ಹೆಸರುಗಳು ಮುಗಿದವು. ಅನಂತರ ಎಲ್ಲಾ ಕುಳಿತರು. ವೇದಿಕೆಗೆ ಚೀಟಿ ಬರೆದು ಕಳಿಸಿದೆ, 'ನಾನು ಬದುಕಿದ್ದೇನೆ ಸ್ವಾಮಿ' ಅವರು ಮರು ಚೀಟಿ ಕಳಿಸಿದರು. 'ಸತ್ತವರ ಸದಸ್ಯತ್ವ ಸಂಖ್ಯೆಯನ್ನ ಗಮನಿಸಿ, ಆ ಎಂ.ಎಸ್. ನರಸಿಂಹಮೂರ್ತಿಯವರ ಸಂಖ್ಯೆ ಬೇರೆ ಇದೆ. ನೀವಿನ್ನೂ ಲೇಟು, ಆರಾಮವಾಗಿರಿ'.

ಒಂದೇ ಹೆಸರಿನ ಬೇರೆ ಯಾರೋ ಸತ್ತಾಗ ಇಂಥ ಗೊಂದಲಗಳಾಗುವುದು ಸಹಜ. 'ತೆರೆದ ಬಾಗಿಲು' ಕವನದಲ್ಲಿ ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿಯವರಿಗೆ ಇದೇ ರೀತಿಯ ಅನುಭವ ಆಗಿತ್ತು. ಅಂದಿನ ದಿನಪತ್ರಿಕೆಯಲ್ಲಿ ನಿಧನದ ಸುದ್ದಿ ಬಂದಿತ್ತು.

'ದಿನಪತ್ರಿಕೆಯ ಹುಡುಗ ಬಂದಿದ್ದ.
ನನಗೊಂದು ಸುದ್ದಿ ತಂದಿದ್ದ.
ಮೂರನೆಯ ಪುಟದಲ್ಲಿ ಅಪಘಾತವಾಗಿತ್ತು.
ನನ್ನ ಹೆಸರಿನ (ಕೆ.ಎಸ್.ನರಸಿಂಹಸ್ವಾಮಿ) ಈ